ಗೋಜಲು, ಯಾವುವೂ ಅಲ್ಲಿರಲಿಲ್ಲ. ಹೊರಗಿರುವಷ್ಟೇ ಜನ ಡಾಕ್ಟ್ರು ಸುತ್ತಮುತ್ತಲೂ ಕವುಚಿಕೊಂಡಿದ್ದರು. ಅವರೆಲ್ಲರ ನಡುವೆ ನನ್ನ ಮಾವ ಹುಗಿದೇ ಹೋಗಿದ್ದರು.

'ಹೀಗೆ ಜನರನ್ನು ಗುಡ್ಡೆ ಹಾಕಿಕೊಂಡು ನೋಡುವುದು ಸರಿಯೇ' ಎಂದು ಮಾವನ ಕೇಳಿದೆ. 'ಇಲ್ಲಿನ ಜನರಿಗೆ ಇದೇ ಇಷ್ಟ. ಇಲ್ಲಿ ಗೌಪ್ಯ ಎಂಬುದೇ ಇಲ್ಲ. ಬೇರೆಯವರು ತಮ್ಮ ರೋಗ ನಿವೇದಿಸಿಕೊಳ್ಳುವುದು ಕೇಳಿದಾಗ ಕೆಲವರಿಗೆ ತಮ್ಮ ವ್ಯಾಧಿ ನೆನಪಾಗುತ್ತದೆ. ಅವರಿಗೆ ಹೇಳುವ ಸಮಾಧಾನ ಇವರ್ಯಾರಿಗೋ ತಾಕುತ್ತದೆ. ಕೆಲ ತಲೆ ತಿನ್ನುವ, ಕೇಳಿದ್ದನ್ನೇ ಮತ್ತೆ ಮತ್ತೆ ಕೇಳುವ ಗಾಂಪರಿಗೆ ಇಲ್ಲಿ ಕೂತಿರುವ ಜನರೇ ತಿಳಿವಳಿಕೆ ಹೇಳುತ್ತಾರೆ. ಎಲ್ಲವನ್ನೂ ನಾನೇ ಹೇಳಲೂ ಆಗುವುದಿಲ್ಲ. ಔಷಧಿ ಮಾತ್ರ ನಾನು ಕೊಡಬಲ್ಲೆ. ಸಮಾಧಾನದ ಉತ್ತರವನ್ನು ಜನರೇ ಪರಸ್ಪರ ಇಲ್ಲಿ ಹಂಚಿಕೊಳ್ಳುತ್ತಾರೆ' ಎಂದರು. ನನಗಂತೂ ಇದೆಲ್ಲಾ ಹೊಸದೆನಿಸಿತು.

ಒಂದೇ ಸಲಕ್ಕೆ ಐದಾರು ಜನರನ್ನು ಮಾತಾಡಿಸುತ್ತಾ, ಅತ್ತ ಯಾರಿಗೋ ಚೀಟಿ ಬರೆದು ಕೊಡುತ್ತಾ, ಇತ್ತ ಮಾತಾಡುತ್ತಲೇ ಮಲಗಿದವರ ಕುಂಡೆಗೆ ಸೊಟ್ಟಕ್ಕಂತ ಸೂಜಿ ಚುಚ್ಚುತ್ತಾ, 'ಗೌಡ್ರೆ ನಿಮ್ ಕಿರಿ ಮಗಳ ಮದ್ವೆ ಆಯ್ತಾ? ಏನಮ್ಮಾ ನಿನ್ನ ಗಂಡ ಕುಡಿಯೋದು ಬಿಟ್ನಾ ಹೆಂಗೆ? ನಿಮ್ಮ ಮಗು ಜ್ವರ ಈಗ ಹೆಂಗಿದೆ? ಮಟ್ಟನವಿಲೆ ದಾಸಪ್ಪಜ್ಜ ಸತ್ತೋದನಂತಲ್ಲೋ ಮಾರಾಯ? ನನಗ್ಯಾರೋ ಹೇಳಲೇ ಇಲ್ಲ. ಈ ಔಷಧಿ ಮೂರು ದಿನ ಕುಡ್ಸಿ ಎಲ್ಲಾ ಸರಿ ಹೋಗುತ್ತೆ' ಎಂದು ಏಕಪಾತ್ರಾಭಿನಯ ಮಾಡುತ್ತಿದ್ದ ಮಾವನ ರೂಪ ಕಂಡು ದಂಗಾಗಿ ಹೋದೆ. ಸಂತೆಯಲ್ಲಿ ನಿಂತ ಸಂತನಂತೆ ಎಲ್ಲರನ್ನೂ ಏಕಕಾಲದಲ್ಲಿ ಸಂತೈಸುವ ಅವರ ಸಹನೆ ಸೋಜಿಗವೆನಿಸಿತು. ಅಷ್ಟೊಂದು ರೋಗದ ಕಣ್ಣುಗಳನ್ನು ನಗುನಗುತ್ತಲೇ ದಿಟ್ಟಿಸುವ, ನಡುವೆ ರೇಗುವ, ಮತ್ತೆ ಶಾಂತರಾಗುವ, ಹಾಗೆ ಸಂತೈಸುವ ಅವರನ್ನೇ ನೋಡುತ್ತಾ ಕೂತೆ. ಅವರ ಕೆಲಸದಲ್ಲಿ ಒಂದು ವಿಚಿತ್ರ ವೇಗವಿತ್ತು.

ಇತ್ತೀಚಿಗೆ ಡಾಕ್ಟ್ರುಗಳು ಇಂಜಕ್ಷನ್ ಕೊಡುವುದನ್ನೇ ಕೈಬಿಡುತ್ತಿದ್ದಾರೆ. ಸಣ್ಣ ಪುಟ್ಟ ರೋಗಗಳಿಗೆಲ್ಲಾ ಔಷಧಿ ಬರೆಯುವ ಖಯಾಲಿ ಈಗ ಹೆಚ್ಚಾಗಿದೆ. ಸೂಜಿಯ ಜಾಗದಲ್ಲಿ ಪೆನ್ನು ಓಡಾಡತೊಡಗಿದೆ. ಸೂಜಿಗಳನ್ನು ಇಂದಿಗೂ ಧಾರಾಳವಾಗಿ ಬಳಸುತ್ತಿರುವವರು ನಮ್ಮ ಮಾವನಂಥ ಹಳೆಯ ಜಮಾನಾದ ಡಾಕ್ಟ್ರುಗಳು ಮಾತ್ರ. ಇಲ್ಲಿನ ಜನರಿಗೆ ಇವರ ಸೂಜಿ ಎಷ್ಟು ಒಗ್ಗಿ ಹೋಗಿದೆ ಎಂದರೆ, ಕಾಯಿಲೆ ಯಾವುದಾದರೂ ಇರಲಿ, ಅದಕ್ಕೆರಡು ಇಂಜಕ್ಷನ್‌ಗಳನ್ನು ಕುಂಡೆಗಳ ಕೊರೆಸಿಕೊಂಡರಷ್ಟೇ ಅವರಿಗೆ ತೃಪ್ತಿ. ಬರೀ ಔಷಧಿ, ಮಾತ್ರೆ ಬರೆದು ಕೊಟ್ಟರೆ ಅವರಿಗೆ ಎಳ್ಳಷ್ಟೂ ಸಮಾಧಾನವಾಗುವುದಿಲ್ಲ. ಬೇಡ, ಅಗತ್ಯವಿಲ್ಲ ಎಂದರೂ ಒಪ್ಪದೆ ಚುಚ್ಚಿಸಿಕೊಂಡೇ ಹೋಗುತ್ತಾರೆ. ಇದು ಅಲ್ಲಿ ಮಾಮೂಲಾಗಿ ಹೋಗಿದೆ.

ನಮ್ಮ ಮಾವನಿಗೆ ಒಂದಿಷ್ಟು ಮರೆವಿನ ಸ್ವಭಾವವಿದೆ. ಅದೃಷ್ಟವೆಂದರೆ ಅವರ ಮಗಳಾದ ನನ್ನ ಪತ್ನಿಗೂ ಅದೇ ಗುಣ ಯಥಾವತ್ತಾಗಿ ಬಂದಿದೆ. ಆದರೆ, ದುಡ್ಡಿನ ವಿಷಯದಲ್ಲಿ ಮಾತ್ರ ಆ ದರಿದ್ರ ಮರೆವು ಕೆಲಸ ಮಾಡುವುದಿಲ್ಲ. ಜನರನ್ನೂ, ಸಂದರ್ಭಗಳನ್ನೂ ಅವರಿಬ್ಬರೂ ನೆನಪಿಟ್ಟುಕೊಳ್ಳುವುದು ತುಂಬಾ ಕಡಿಮೆ. ನನ್ನ ಸ್ನೇಹಿತರನ್ನೇ ತಿರುಗಾಮುರುಗ ಏಳೆಂಟು ಸಲ ಪರಿಚಯಿಸಿದ್ದರೂ ಮತ್ತೆ ಸಿಕ್ಕಾಗ ಹೊಸದಾಗಿ ಹೇಳಲೇಬೇಕು. ಪುಣ್ಯವೆಂದರೆ ಇವರಿಬ್ಬರೂ ಇಲ್ಲೀತನಕ ನನ್ನನ್ನು ಮರೆಯದಿರುವುದು.

ಒಮ್ಮೆ ಒಂದು ದಢೂತಿ ಹೆಂಗಸು ಏನೋ ಕಾಯಿಲೆ ಎಂದು ಹೇಳಿ ಸೂಜಿ ಚುಚ್ಚಿಸಿಕೊಳ್ಳಲು ಟೇಬಲ್ ಏರಿ ಮಲಗಿದಳು. ಮತ್ತೊಂದು ಹೆಣ್ಣು ಮಗಳು ಸರತಿ ಸಾಲಲ್ಲಿ ನಿಂತಿದ್ದಳು. ಹೀಗೆ ಒಬ್ಬರಾದ ಮೇಲೊಬ್ಬರು ಚಕಚಕಾಂತ ಟೇಬಲ್ ಮೇಲೆ ಮಲಗಿ ಸೊಂಟಕ್ಕೆ ಚುಚ್ಚುಮದ್ದು